# ಚನ್ನಪಟ್ಟಣ ತಾಲ್ಲೂಕಿನ ಶಾಸನಗಳಲ್ಲಿ ಚಿತ್ರಣಗೊಂಡಿರುವ ಮಹಿಳೆಯರು

**ಡಾ. ಎಂ. ಕೆ. ಮಂಜುನಾಥ**
ಪ್ರಾಂಶುಪಾಲರು,
ಶ್ರೀ ಆದಿಚುಂಚನಗಿರಿ ಪ್ರಥಮದರ್ಜೆ ಕಾಲೇಜು
ಚನ್ನರಾಯಪಟ್ಟಣ–573116
drmkmanju@gmail.com

ಭಾರತೀಯ ಸಮಾಜ ಪುರುಷ ಪ್ರಧಾನವಾಗಿದ್ದರೂ, ಪ್ರಾಚೀನ ಕಾಲದಲ್ಲಿ ಮಹಿಳೆಯರಿಗೂ ಉನ್ನತ ಸ್ಥಾನ ನೀಡಿರುವುದನ್ನು ಕಾಣಬಹುದು. ಮಮತಾಮಹಿ, ದಯಾಮಯಿಯಾದ ತಾಯಿ ನಿಸ್ವಾರ್ಥಳಾಗಿ ಮನೆಯ ಏಳ್ಗೆಗಾಗಿ ದುಡಿದುದ್ದರಿಂದಲೇ ದೇವತೆ ಎನಿಸಿಕೊಂಡಿದ್ದಾಳೆ. ಈಕೆಯನ್ನು ಭೂಮಿ, ಜಲ, ಪ್ರಕೃತಿ, ಶಕ್ತಿ ಮುಂತಾದವುಗಳಿಗೆ ಹೋಲಿಸಿದ್ದಾರೆ. ನಮ್ಮ ಸಮಾಜವು ಮಹಿಳೆಯನ್ನು 'ಮಾತೃದೇವೋಭವ' ಎಂದು ಗೌರವಿಸುತ್ತದಲ್ಲದೆ, 'ಯತ್ರ ನಾರ್ಯಸ್ತು ಪೂಜಂತೇ ರಮಂತೇ ತತ್ರ ದೇವತಾಃ' ಎಂಬ ಪೂಜ್ಯಭಾವನೆ ಹೊಂದಿರುವುದನ್ನು ಕಾಣಬಹುದು. ಮಹಿಳೆಯು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಪ್ರತಿಭೆ ಸಾಮರ್ಥ್ಯಗಳನ್ನು ತೋರಿಸಿದ್ದಾಳೆ.

ಪ್ರಾಚೀನ ಕಾಲದಿಂದ ಹಿಡಿದು ಇಲ್ಲಿಯ ತನಕ ಭಾರತೀಯ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ಅನೇಕ ಏಳು–ಬೀಳುಗಳನ್ನು ಅನುಭವಿಸುತ್ತಾ ಬಂದಿದೆ. ಸಮಾಜದಲ್ಲಿ ಮಹಿಳೆಯು ಗೃಹಿಣಿಯಾಗಿ, ತಾಯಿಯಾಗಿ, ಪತ್ನಿಯಾಗಿ, ಸಹೋದರಿಯಾಗಿ, ಪೋಷಕಿಯಾಗಿ, ಮಗಳಾಗಿ, ಹೋರಾಟಗಾರ್ತಿಯಾಗಿ, ವ್ಯಾಪಾರಗಾರಳಾಗಿ, ಕವಯಿತ್ರಿಯಾಗಿ, ಆಡಳಿತಾಧಿಕಾರಿಯಾಗಿ, ಹೀಗೆ ಬಹುರೂಪಳಾಗಿ ತನ್ನ ಪ್ರೀತಿ–ವಾತ್ಸಲ್ಯಗಳ ಸೆಲೆಯನ್ನು ಉಕ್ಕಿಸಿ ಬಾಂಧವ್ಯದ ಬೆಸುಗೆಯಾಗಿದ್ದಾಳೆ.

ಅಂದಿನ ಸಮಾಜದಲ್ಲಿ ಸ್ತ್ರೀಯರಿಗೆ ಹೆಚ್ಚಿನ ಸ್ವಾತಂತ್ರ್ಯವಿಲ್ಲದಿದ್ದರೂ, ತನಗಿರುವ ಅಲ್ಪ ಸ್ವಾತಂತ್ರ್ಯದಲ್ಲೇ ಸಾಧ್ಯವಾದಷ್ಟು ಮಟ್ಟಿಗೆ ಸಮಾಜದ ಎಲ್ಲಾ ಕ್ಷೇತ್ರಗಳಿಗೆ ತನ್ನದೇ ಆದ ಕೊಡುಗೆಗಳನ್ನು ನೀಡಿದ್ದಾಳೆ. ಜೀವನದ ವಿವಿಧ ಕ್ಷೇತ್ರಗಳನ್ನು ಸಂಪದ್ಭರಿತಗೊಳಿಸಿದ್ದಾಳೆ. ಕೇವಲ ರಾಜಮನೆತನದ ಅಥವಾ ಮೇಲ್ವರ್ಗದ ಸ್ತ್ರೀಯರು ಮಾತ್ರವಲ್ಲದೆ, ಸಾಮಾನ್ಯ ಮಹಿಳೆಯರೂ ಸಹ ಸಮಾಜದ ಎಲ್ಲಾ ರಂಗಗಳಲ್ಲಿ ಸಕ್ರಿಯ ಪಾತ್ರ ವಹಿಸಿದ್ದಾರೆ. ದೇವಾಲಯಗಳನ್ನು ಕಟ್ಟಿಸಿ ದಾನದತ್ತಿ ನೀಡಿದ್ದಾರೆ. ರಾಜ್ಯವನ್ನಾಳಿದ್ದಾರೆ, ಶತ್ರುಗಳೊಂದಿಗೆ ಹೋರಾಡಿ ವೀರಮರಣವನ್ನಪ್ಪಿದ್ದಾರೆ. ಅಲ್ಲದೆ ಸತಿಧರ್ಮವನ್ನು ಪಾಲಿಸಿ ಅಮರರೂ ಆಗಿದ್ದಾರೆ. ಪ್ರಸ್ತುತ ಈ ಲೇಖನದಲ್ಲಿ ಚನ್ನಪಟ್ಟಣ ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಮಹಿಳೆಯರ ಸ್ಥಾನಮಾನವನ್ನು ಕುರಿತು ಚರ್ಚಿಸಲಾಗಿದೆ.

ರಾಜಮನೆತನದ ಮಹಿಳೆಯರು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಜೊತೆಗೆ ತಮ್ಮ ಪತಿಯೊಂದಿಗೆ ಜೊತೆಗೂಡಿ ರಾಜ್ಯವಾಳಿದ ಅನೇಕ ಉಲ್ಲೇಖಗಳಿವೆ. ತಾಲ್ಲೂಕಿನ ಮಳೂರುಪಟ್ಣ ಗ್ರಾಮದ

DOI: 10.59176

ಅರ್ಕೇಶ್ವರ ದೇವಾಲಯದಲ್ಲಿರುವ ಗಂಗರ ಕಾಲದ ಶಾಸನದಲ್ಲಿ ಕಂಚಿಯಬ್ಬೆಯ ಉಲ್ಲೇಖವಿದೆ.[1] ಈ ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಆದರೆ ಈಕೆ ಗಂಗದೊರೆ ಶ್ರೀಪುರುಷನ ಮಗನಾದ ದುಗ್ಗಮಾರ ಎರೆಯಪ್ಪನ ಮಡದಿಯಾಗಿದ್ದು, ಈಕೆ ಆಗಳಿನಾಡನ್ನು ಆಳುತ್ತಿದ್ದುದನ್ನು ಮುಳಬಾಗಿಲಿನ ಶಾಸನವೊಂದರಲ್ಲಿ ದಾಖಲಾಗಿದೆ.[2]

ಚೋಳರ ಕಾಲದಲ್ಲಿ ರಾಣಿಯರ ಹೆಸರನ್ನು ತಾಲ್ಲೂಕಿನಲ್ಲಿ ಸ್ಥಾಪಿತವಾದ ಚತುರ್ವೇದಿಮಂಗಲಗಳಿಗೆ ನಾಮಕರಣ ಮಾಡಿರುವುದನ್ನು ಕಾಣಬಹುದು. ಕ್ರಿ.ಶ. 1007ರ ಮಳೂರುಪಟ್ಣ ಗ್ರಾಮದ ತಮಿಳು ಶಾಸನವೊಂದರಲ್ಲಿ ಚೋಳ ದೊರೆ ರಾಜರಾಜಚೋಳನ ಕಾಲದಲ್ಲಿ ಪುಂಗನೂರನ್ನು (ಈಗಿನ ಹೊಂಗನೂರು) ಅಗ್ರಹಾರವಾಗಿ ನಿರ್ಮಿಸಿ, ಆ ಅಗ್ರಹಾರಕ್ಕೆ ರಾಜರಾಜಚೋಳನ ಮಡದಿಯಾದ ತ್ರೈಲೋಕ್ಯ ಮಹಾದೇವಿಯ ಹೆಸರಿನಿಂದ, ಅಂದರೆ 'ತ್ರೈಲೋಕ್ಯ ಮಾದೇವಿ ಚತುರ್ವೇದಿಮಂಗಲಂ' ಎಂದು ಕರೆದಿರುವುದನ್ನು ಕಾಣಬಹುದು.[3] ಅದೇ ರೀತಿ ಇದೇ ಗ್ರಾಮದ ಮತ್ತೊಂದು ಶಾಸನದಲ್ಲಿ ಕೆಳಲೆನಾಡಿನ ವಣ್ಣೂರನ್ನು ಅಗ್ರಹಾರವಾಗಿ ಪರಿವರ್ತಿಸಿದಾಗ ರಾಜರಾಜಚೋಳನ ಮತ್ತೊಬ್ಬಳು ಮಡದಿಯಾದ ಚೋಳಮಹಾದೇವಿಯ ಹೆಸರಿನಲ್ಲಿ 'ಚೋಳಮಾದೇವಿ ಚತುರ್ವೇದಿಮಂಗಲಂ' ಎಂದು ಕರೆದಿರುವುದನ್ನು ಗುರುತಿಸಬಹುದು.[4] ಈ ಶಾಸನಗಳಿಂದ ರಾಣಿಯರು ಅಂದಿನ ಕಾಲದ ಸಮಾಜದಲ್ಲಿ ಪ್ರಾಮುಖ್ಯತೆಯನ್ನು ಪಡೆದಿದ್ದರು ಎಂದು ತಿಳಿಯುತ್ತದೆ.

ಒಂದು ಕಾಲಕ್ಕೆ ಮಹಿಳೆಯರು ಕಣ್ಣೆದುರಿಗಿಟ್ಟುಕೊಂಡಿದ್ದ ಆದರ್ಶ, ಮೌಲ್ಯ, ನಂಬಿಕೆಗಳು ಇಂದಿನ ಕಾಲದ ಮಹಿಳಾ ವರ್ಗಕ್ಕೆ ಕುರುಡಾಗಿ, ಅರ್ಥಹೀನವಾಗಿ ಕಾಣಿಸಬಹುದು. ಆದರೆ ಕಾಲದಿಂದ ಕಾಲಕ್ಕೆ ಬದಲಾಗುತ್ತಲಿರುವ, ಬದಲಾಗಬೇಕಾದ ಮೌಲ್ಯಗಳು ಆಯಾ ಕಾಲದ ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ ಮಹತ್ವಪೂರ್ಣ ಘಟಕಗಳಾಗಿರುತ್ತವೆಯೆಂಬ ದೃಷ್ಟಿಯಿಂದ ಅವರು ಅಂಗೀಕರಿಸಿದ್ದ ಆತ್ಮಬಲಿದಾನ, ಸತಿಪದ್ಧತಿಗಳಂತಹ ಆಚರಣೆಗಳನ್ನು ನೋಡಬಹುದು. ಚನ್ನಪಟ್ಟಣ ತಾಲ್ಲೂಕಿನಲ್ಲಿ ಮಾಸ್ತಿಶಿಲ್ಪಗಳು ಹೇರಳವಾಗಿ ದೊರೆಯುತ್ತವೆ. ಆಗಿನ ಕಾಲದ ಸಾಮಾಜಿಕ ಪರಿಸ್ಥಿತಿಯನ್ನು ಕುರಿತು ಅಧ್ಯಯನ ನಡೆಸಿದಾಗ ಮಾತ್ರ ಈ ಮಾಸ್ತಿಶಿಲ್ಪಗಳ ಮೌಲ್ಯ ಅರಿವಾಗುತ್ತದೆ. ಹೀಗಾಗಿ ಅಂದಿನ ಕಾಲದ ಮಹಿಳೆಯರು ಪಾಲಿಸಿದ ಜೀವನದ ಆದರ್ಶ, ಬದುಕಿನ ಮೌಲ್ಯ, ಅನುಸರಿಸಿದ ನಂಬಿಕೆಗಳೇ ನಮಗೆ ಹಾಗೂ ನಮ್ಮ ಮುಂದಿನ ಜನಾಂಗಕ್ಕೆ ಬಾಳಬುತ್ತಿಯಾಗಿ ನಿಲ್ಲುತ್ತವೆಯೆಂದು ಹೇಳಬಹುದು.

ಚನ್ನಪಟ್ಟಣ ತಾಲ್ಲೂಕಿನ ಬೈರನಾಯಕನಹಳ್ಳಿಯ ಅಮ್ಮಳ್ಳಿದೊಡ್ಡಿ ವೀರಭದ್ರ ದೇವಸ್ಥಾನದಲ್ಲಿ ನೆಟ್ಟ ತೋಳುಗೈ ಕಲ್ಲಿನಲ್ಲಿನ ಶಾಸನದಲ್ಲಿ ಮಹಾಸತಿಯಾದ ಗುಜಿಗವುಡಿಯ ಉಲ್ಲೇಖವಿದೆ.[5] ವಿಜಯನಗರ ಅರಸರ ಆಳ್ವಿಕೆಯ ಕಾಲದ ಈ ಶಾಸನದಲ್ಲಿ ಹಿರಿಯ ಅಂಕಣ್ಣ ಎಂಬುವನು ಮಡಿದಾಗ ಆತನ ಪತ್ನಿಯಾದ ಗುಜಿಗವುಡಿಯು ಸಹಗಮನವನ್ನು ಅನುಸರಿಸಿ ಪ್ರಾಣತ್ಯಾಗ ಮಾಡಿದಾಗ ತೋಳುಗೈ ಪ್ರತಿಷ್ಠಾಪಿಸಿದ ವಿವರ ದಾಖಲಾಗಿರುವುದನ್ನು ಕಾಣಬಹುದು.

ಪ್ರಾಚೀನ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಆತ್ಮ ಬಲಿದಾನ ಪ್ರಕಾರಗಳಲ್ಲಿ ಒಂದಾದ ಇದು ಪ್ರಿಯ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಪತಿಯ ಸಲುವಾಗಿ ಸತಿಯು ಸಾಯುವ ದೃಢ ನಿರ್ಧಾರ ಕೈಗೊಂಡರೆ 'ಸಹಗಮನ ಮರಣ' ಎನ್ನುವರು. ಪತಿಯ ಯಾವುದೇ ರೀತಿಯ ಮರಣಾನಂತರ ಆತನ ಮಡದಿ ಪ್ರಮುಖವಾಗಿ ಅಗ್ನಿಪ್ರವೇಶದ ಮೂಲಕ, ಗೌಣವಾಗಿ ಇತರ ವಿಧಾನಗಳ ಮೂಲಕ ತನ್ನ ಪ್ರಾಣವನ್ನು ಬಲಿಕೊಡುತ್ತಿದ್ದಳು. ಹೀಗೆ ಪ್ರಾಣವನ್ನು

ಅರ್ಪಿಸುವವಳನ್ನು 'ಮಹಾಸತಿ' ಎಂದು ಕರೆದು ಸಮಾಜದಲ್ಲಿ ಉನ್ನತ ಸ್ಥಾನವನ್ನು ಗಳಿಸಿಕೊಳ್ಳುತ್ತಿದ್ದಳು. ಈ ಪದ್ಧತಿ ಅಸ್ತಿತ್ವದಲ್ಲಿರಲು ಏನೇ ಕಾರಣವಿದ್ದರೂ ಪುರುಷರ, ಪುರೋಹಿತ ಶಾಹಿಗಳ ಹಾಗೂ ಪ್ರಭುಗಳ ಒತ್ತಾಯ, ಮುಗ್ಧ ಸ್ತ್ರೀಯರ ಒತ್ತಾಸೆಗಳಿಂದಾಗಿ ಈ ಪದ್ಧತಿ ಸಮಾಜದಲ್ಲಿ ಒಂದು ದೈವೀ ಮೌಲ್ಯವಾಗಿ ಪರಿಗಣಿಸಿತ್ತು. ಮಹಾಸತಿಯಾಗಿ ಮರಣ ಹೊಂದಿದ್ದವರ ನೆನಪಿಗಾಗಿ ಮಾಸ್ತಿಗಲ್ಲುಗಳನ್ನು ನಿರ್ಮಿಸಿ, ಅವುಗಳನ್ನು ಗುಡಿಯಲ್ಲಿಟ್ಟು ಆರಾಧಿಸುವ ಪರಂಪರೆ ಬೆಳೆದುಬಂದಿರುವುದನ್ನು ಗುರುತಿಸಬಹುದು.

ಪ್ರಸ್ತುತದ ಗುಜಿಗೌಡಿಯ ಮಾಸ್ತಿಕಲ್ಲನ್ನು ಇಂದಿಗೂ ವೀರಭದ್ರ ದೇವಾಲಯದಲ್ಲಿಟ್ಟು ಪೂಜಿಸುತ್ತಿದ್ದಾರೆ. ಮಾಸ್ತಿಯಾಗ ಬಯಸುವವಳನ್ನು ಪ್ರಾಚೀನ ಸಮಾಜ ಪವಿತ್ರ ದೃಷ್ಟಿಯಿಂದ ಕಾಣುತ್ತಿತ್ತು. ಅಂದಿನ ಕಾಲದಲ್ಲಿ ಒಬ್ಬ ವೀರನ ಸಮಾನ ಸ್ಥಾನವನ್ನು ಮಹಾಸತಿಯೂ ಪಡೆದುಕೊಳ್ಳುತ್ತಿದ್ದುದು ಬಹುಮುಖ್ಯ ಸಂಗತಿ. ಈ ಪದ್ಧತಿ ಎರಡು ಬಗೆಯಲ್ಲಿ ಕಂಡುಬರುತ್ತದೆ. ಮರಣ ಹೊಂದಿದ ಗಂಡನ ಶವದೊಡನೆ ಅಗ್ನಿ ಪ್ರವೇಶ ಮಾಡುವುದು ಸಹಗಮನವಾದರೆ, ದೂರದ ಪ್ರದೇಶದಲ್ಲಿ ಮಡಿದ ಪತಿಯ ಶವ ಸಿಗದೇ ಹೋದರೆ ಆತನ ಪ್ರಿಯವಾದ ಒಂದು ವಸ್ತುವಿನೊಡನೆ ಅಗ್ನಿ ಪ್ರವೇಶಗೈಯುವುದು ಅನುಗಮನ ಪದ್ಧತಿಯಾಗಿದೆ.

ಮಹಾಸತಿ ಆಚರಣೆಗೆ ತದ್ವಿರುದ್ಧವಾದ ವಿಚಾರ ಕ್ರಿ. ಶ. 1155ರ ಹೊಂಗನೂರು ಗ್ರಾಮದ ವೀರಗಲ್ಲಿನಲ್ಲಿದೆ.[6] ಇದರಲ್ಲಿ ಹೊಯ್ಸಳ ದೊರೆ ವೀರನರಸಿಂಹನ ಆಳ್ವಿಕೆಯ ಕಾಲದಲ್ಲಿ ಹೊಸಗುಂದದ ಕೋಟೆಕಾಳಗದಲ್ಲಿ ಕನಕನಾಯಕನೆಂಬುವನು ವೀರಮರಣ ಹೊಂದಿದಾಗ ಆತನ ಹೆಂಡತಿಯಾದ ನಾಗವ್ವೆ ತನ್ನ ಗಂಡನಿಗೆ ವೀರಗಲ್ಲನ್ನು ಹಾಕಿಸಿದ ವಿವರವಿದೆ. ಹನ್ನೆರಡನೆಯ ಶತಮಾನದಲ್ಲಿ ಗಂಡ ಮಡಿದಾಗ ಆತನ ಮಡದಿ ಸಹಗಮನವಾಗದೆ ಹಾಗೆಯೇ ಉಳಿದ ಮಹಿಳೆಯರಿಗೆ ನಾಗವ್ವೆ ಉದಾಹರಣೆಯಾಗಿ ನಿಲ್ಲುತ್ತಾಳೆ.

ಪ್ರಾಚೀನ ಕರ್ನಾಟಕದ ಇತಿಹಾಸವನ್ನು ಗಮನಿಸಿದಾಗ ಯುದ್ಧದಲ್ಲಿ ಮಡಿದ ವೀರರ ಪತ್ನಿಯರು ಹೆಚ್ಚಿನ ಸಂಖ್ಯೆಯಲ್ಲಿ ಸಹಗಮನ ಕೈಗೊಂಡಿರುವುದನ್ನು ಕಾಣಬಹುದು. ಹೀಗಾಗಿ ಪ್ರೌಢ ವಯಸ್ಸಿನ ವೀರರ ಪತ್ನಿಯರೇ ಈ ಕ್ರಿಯೆಯಲ್ಲಿ ಪಾಲ್ಗೊಂಡಿರಬೇಕು. ವಯಸ್ಸಾದವರಾಗಲೀ ಚಿಕ್ಕ ವಿಧವೆಯರಾಗಲಿ ಸಹಗಮನ ಹೊಂದುವುದಕ್ಕೆ ರಿಯಾಯಿತಿಯನ್ನು ಅಂದಿನ ಸಮಾಜ ನೀಡಿತ್ತು ಎಂದು ತಿಳಿಯುತ್ತದೆ. ಇದಲ್ಲದೇ ವೀರಮರಣ ಪಡೆದ ವ್ಯಕ್ತಿಗಳಿಗೆ ಅವರ ಮಡದಿಯರೇ ವೀರಗಲ್ಲು ನಿಲ್ಲಿಸುತ್ತಿದ್ದುದಕ್ಕೆ ಉದಾಹರಣೆಯಾಗಿ ಶಾಸನೋಕ್ತ ಕನಕನಾಯಕನ ಮಡದಿಯಾದ ನಾಗವ್ವೆಯನ್ನು ಕಾಣಬಹುದು. ಈ ಶಾಸನದಿಂದ ಸಹಗಮನ ಪದ್ಧತಿಯು ಕಡ್ಡಾಯವಾಗಿರದೆ ವೀರಮರಣ ಪಡೆದವರ ಮಡದಿಯರ ಇಚ್ಛೆಯನ್ನವಲಂಬಿಸಿದ್ದುದು ಸ್ಪಷ್ಟವಾಗುತ್ತದೆ.

ದಾನ ಮತ್ತು ಲೋಕಹಿತ ಕಾರ್ಯಗಳನ್ನು ಮೇಲ್ವರ್ಗದವರಷ್ಟೇ ಅಲ್ಲದೆ ಸಾಮಾನ್ಯ ವರ್ಗದ ಮಹಿಳೆಯರೂ ಕೈಗೊಂಡಿದ್ದಾರೆ. ಅನೇಕ ದೈವಭಕ್ತ ಮಹಿಳೆಯರು ದೇವಾಲಯಗಳ ನಿರ್ಮಾಣ, ದೇವಾಲಯಗಳಿಗೆ ದಾನ–ದತ್ತಿ ನೀಡುವುದು ಮೊದಲಾದಂತಹ ಅನೇಕ ಧಾರ್ಮಿಕ ಕಾರ್ಯಗಳಲ್ಲಿ ಸಕ್ರಿಯ ಪಾತ್ರ ವಹಿಸಿರುವುದನ್ನು ಕಾಣಬಹುದು. ಇವಲ್ಲದೆ ಕೆರೆ, ಬಾವಿ, ಸತ್ರ, ಅರವಟ್ಟಿಗೆ ನಿರ್ಮಾಣ ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು.

ತಾಲ್ಲೂಕಿನ ಮೆಣಸಿಗನಹಳ್ಳಿಯ ಕ್ರಿ. ಶ. 1281ರ ಶಾಸನದಲ್ಲಿ[7] ಹೊಯ್ಸಳ ದೊರೆ ಮೂರನೇ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಭಂಡಾರಿ ರಾಮಯ್ಯನ ಕುಮಾರ್ತೆ(ಮಗಳು) ಕನಕಗಿರಿಯ ದೇವರಿಗೆ ಗದ್ದೆ ಮತ್ತು ಬೆದ್ದಲು ಹೊಲವನ್ನು ದಾನವಾಗಿ ಬಿಟ್ಟ ವಿವರವಿದೆ. ಶಾಸನದಲ್ಲಿ ಈಕೆಯ ಹೆಸರು ಉಲ್ಲೇಖವಾಗಿಲ್ಲ. ಈ ಶಾಸನೋಕ್ತ ಕನಕಗಿರಿಯು

ಈಗಿನ ಮದ್ದೂರು ತಾಲ್ಲೂಕಿನ ಅರೆತಿಪ್ಪೂರಾಗಿದೆ. ಇದು ಚನ್ನಪಟ್ಟಣ ತಾಲ್ಲೂಕಿನ ಗಡಿಭಾಗದಲ್ಲಿರುವ ಸ್ಥಳ. ಅರೆತಿಪ್ಪೂರು ಕ್ರಿ.ಶ. 9ನೇ ಶತಮಾನದಲ್ಲಿಯೇ ಪ್ರಸಿದ್ಧ ಜೈನ ಕೇಂದ್ರವಾಗಿತ್ತು ಎಂದು ತಿಳಿಯುತ್ತದೆ. ಬಹುಶಃ ಶಾಸನೋಕ್ತ ಭಂಡಾರಿ ರಾಮಯ್ಯನ ಮಗಳು ಜೈನಧರ್ಮೀಯಳಾಗಿದ್ದು, ಕನಕಗಿರಿಗೆ ಸುಮಾರು 25 ಕಿ.ಮೀ. ದೂರದಲ್ಲಿರುವ ಮೆಣಸಿಗನಹಳ್ಳಿ ಗ್ರಾಮದಲ್ಲಿ ಭೂದಾನ ಮಾಡಿರುವುದನ್ನು ಕಾಣಬಹುದು.

ಮಳೂರು ಗ್ರಾಮದ ಶ್ರೀ ಅಪ್ರಮೇಯಸ್ವಾಮಿ ದೇವಸ್ಥಾನದ ಪಾತಾಳ ಮಂಟಪದಲ್ಲಿ ಮಹಾದ್ವಾರಕ್ಕೆ ಬಲಗಡೆ ನಿಲ್ಲಿಸಿರುವ ಸ್ತ್ರೀಪ್ರತಿಮೆಯಲ್ಲಿ 'ಮಂಚಿಲ ಕುಂಮಿಯ ಸೇವೆ' ಎಂಬ ಬರಹವಿದೆ.[8] ಸ್ಥಳೀಯವಾಗಿ ದೇವಾಲಯದಲ್ಲಿ ಪ್ರತಿಷ್ಠಾಪಿಸಿರುವ ಈ ಸ್ತ್ರೀ ಶಿಲ್ಪವನ್ನು ಚನ್ನಪಟ್ಟಣ ಪಾಳೆಯಗಾರನೊಬ್ಬನ ಹೆಂಡತಿಯದೆಂದು ಹೇಳುತ್ತಾರೆ. ಕ್ರಿ.ಶ. 1570ರಿಂದ 1630ರವರೆಗೆ ಚನ್ನಪಟ್ಟಣ ರಾಜ್ಯವನ್ನು ಆಳ್ವಿಕೆ ನಡೆಸಿದ ಜಗದೇವರಾಯನ ಸಂತತಿಯವರು ಪಾಳೆಯಗಾರರಾಗಿ ಪ್ರಸಿದ್ಧರಾಗಿದ್ದವರು. ಈ ಶಾಸನೋಕ್ತ ಮಂಚಿಲಕುಮ್ಮಿಯು ಈ ಪಾಳೆಯಗಾರ ಮನೆತನಕ್ಕೆ ಸೇರಿದವಳಾಗಿರಬಹುದು. ಮಂಚಿಲಕುಮ್ಮಿಯು ಚೋಳರ ಕಾಲದಲ್ಲಿ ನಿರ್ಮಾಣಗೊಂಡ ಅಪ್ರಮೇಯ ದೇವಾಲಯಕ್ಕೆ ದಾನ ಕೊಟ್ಟಿರಬೇಕು ಇಲ್ಲವೇ ದೇವಾಲಯದ ಜೀರ್ಣೋದ್ಧಾರ ಕಾರ್ಯ ಮಾಡಿಸಿರಬೇಕು. ಇದರ ಕುರುಹಾಗಿ ಕೈ ಮುಗಿದು ನಿಂತಿರುವ ಭಂಗಿಯಲ್ಲಿರುವ ಶಿಲಾಪ್ರತಿಮೆಯನ್ನು ಪ್ರತಿಷ್ಠಾಪಿಸಿರಬೇಕೆಂದು ಊಹಿಸಬಹುದು. ಏಕೆಂದರೆ ಅಪ್ರಮೇಯಸ್ವಾಮಿ ದೇವಾಲಯದ ಪ್ರಕಾರ ಗೋಡೆಯನ್ನು ಚನ್ನಪಟ್ಟಣದ ಪಾಳೆಯಗಾರರು ನಿರ್ಮಿಸಿದರೆಂಬ ಪ್ರತೀತಿಯಿದೆ.

ಚನ್ನಪಟ್ಟಣ ನಗರದ ಬಳೇಪೇಟೆಯಲ್ಲಿರುವ ಹಳೆಯ ಕಮತೇಶ್ವರ ದೇಗುಲದಲ್ಲಿನ ಶಾಸನದಲ್ಲಿ 'ನಾಗಂಣ ಕೊಮಾರ್ತೆ ಕೆಂಪಮ್ಮ' ಎಂಬ ಬರಹವಿರುವುದನ್ನು ಕಾಣಬಹುದು.[9] ವಿಜಯನಗರ ಶೈಲಿಯಲ್ಲಿ ರಚನೆಗೊಂಡಿರುವ, ಪ್ರಸ್ತುತದಲ್ಲಿ ಶಿಥಿಲಗೊಂಡಿರುವ ಈ ಪಾಳು ದೇವಾಲಯದ ಪ್ರವೇಶದ್ವಾರದ ಬಲಬದಿಯ ಶಿಲಾಸ್ತಂಭದ ಮೇಲೆ ಈ ಶಾಸನವಿದೆ. ಈ ಶಾಸನ ಪಾಠದ ಕೆಳಗೆ ಒರಟು ಕೆತ್ತನೆಯ ಸ್ತ್ರೀಶಿಲ್ಪವಿದ್ದು, ಮೊಗ ಮಾತ್ರ ಅಂದವಾಗಿ ಕೆತ್ತಲ್ಪಟ್ಟು ಕರ್ಣಕುಂಡಲವನ್ನು ಹೊಂದಿರುವ ಕಲಾತ್ಮಕ ಕೆತ್ತನೆ ಎನಿಸುತ್ತದೆ. ನಾಗಣ್ಣ ಎಂಬುವನ ಮಗಳಾದ ಕೆಂಪಮ್ಮಳು ಕಮತೇಶ್ವರ ದೇವಾಲಯಕ್ಕೆ ಮಾಡಿದ ಸೇವೆಗಾಗಿ ಶಾಸನವನ್ನು ಹಾಕಿಸಿರಬೇಕು. ಬಹುಶಃ ಈ ದೇವರ ಭಕ್ತೆಯಾಗಿದ್ದ ಕೆಂಪಮ್ಮಳು ಕಟ್ಟಿಸಿದ ದೇವಾಲಯವೋ ಅರ್ಥಾತ್ ತಂದೆಗೆ ಪುಣ್ಯವಾಗಲಿ ಎಂದು ನಿರ್ಮಿಸಿದ ದೇಗುಲವಾಗಿ ಆಕೆಯನ್ನು ಪ್ರಣಾಮ ಭಂಗಿಯಲ್ಲಿ ನಿಲ್ಲಿಸಿ ಕಡೆವ ಶಿಲ್ಪ ಪ್ರಯತ್ನವಾಗಿರುವಂತಿದೆ.

ಕ್ರಿ.ಶ. 1828ರ ಕೂಡ್ಲೂರು ಗ್ರಾಮದ ಶ್ರೀರಾಮ ದೇವರ ದೇವಾಲಯದಲ್ಲಿ ಶಿಲಾಶಾಸನದಲ್ಲಿ[10] ಕಾನಕಾನಹಳ್ಳಿಯ (ಈಗಿನ ಕನಕಪುರ) ವೆಂಕಟಲಕ್ಷ್ಮಿ ಎಂಬುವರು ಕೂಡ್ಲೂರ ಶ್ರೀರಾಮಸ್ವಾಮಿ ದೇವಸ್ಥಾನಕ್ಕೆ ಶ್ರೀರಾಮನವಮಿ ಉತ್ಸವಕ್ಕಾಗಿ ಕೂಡ್ಲೂರ ಶಾನಭೋಗ ಕಪನಿಪತ್ಯೆಯ್ಯರಿಂದ ಖರೀದಿಸಿದ ಮತ್ತಿಕದ ತೆಂಗಿನ ತೋಟವನ್ನು ದಾನವಾಗಿ ನೀಡಿದ ವಿವರವಿದೆ. ಈ ಗ್ರಾಮದಲ್ಲಿ ಶ್ರೀರಾಮನವಮಿ ಉತ್ಸವ ನಡೆಯಲು ಬೇಕಾದ ಹಣಕಾಸು ಸಹಾಯಕ್ಕಾಗಿ ತೆಂಗಿನ ತೋಟವನ್ನು ದಾನವಾಗಿ ನೀಡಿ ಅದರಿಂದ ಬರುವ ಆದಾಯದಲ್ಲಿ ದೇವರ ಉತ್ಸವದ ಖರ್ಚುವೆಚ್ಚ ಸರಿದೂಗಿಸುವ ವ್ಯವಸ್ಥೆ ಮಾಡಿದ್ದರೆಂದು ತಿಳಿಯುತ್ತದೆ.

ಬಹುಶಃ ಈಕೆಯು ಕಾನಕಾನಹಳ್ಳಿಯ ಮೇಲ್ವರ್ಗಕ್ಕೆ ಸೇರಿದ ಮಹಿಳೆಯಾಗಿರಬೇಕು. ತೋಟವನ್ನು ಖರೀದಿಸಿ ದೇವಾಲಯಕ್ಕೆ ದಾನ ನೀಡುವಷ್ಟು ಆರ್ಥಿಕ ಪ್ರಾಬಲ್ಯವನ್ನು ಪಡೆದಿದ್ದಳೆಂಬುದು ಸ್ಪಷ್ಟ. ಉನ್ನತ ವರ್ಗದ ರಾಜ ಪರಿವಾರದವರಂತೆ ಸಾಮಾನ್ಯ ವರ್ಗದ ಮಹಿಳೆಯರು ದಾನ ಕಾರ್ಯಗಳಲ್ಲಿ ತೊಡಗುತ್ತಿದ್ದರು. ಆರ್ಥಿಕವಾಗಿ

DOI: 10.59176
http://www.kristujayantijournal.com/index.php/KJKSP

ಮುಂದುವರಿದ ಕುಟುಂಬಕ್ಕೆ ಸೇರಿದವರು ಇವರು. ದೇವಾಲಯಗಳ ಪೂಜಾ ಕಾರ್ಯಕ್ಕೆ ತಮ್ಮ ಕೈಲಾದ ದಾನವನ್ನು ನೀಡಿ ಸಾಮಾನ್ಯ ಮನೆತನದ ಮಹಿಳೆಯರ ಮೇಲೆ ಪ್ರಭಾವ ಬೀರಿ ಅವರನ್ನು ದಾನಪ್ರೇಮಿಗಳನ್ನಾಗಿ ಮಾಡಿಸುತ್ತಿತ್ತು. ಕ್ರಿ.ಶ. 1013ರ ಹೊಂಗನೂರಿನ ಗೋಪಾಲಕೃಷ್ಣ ದೇವಾಲಯದ ತಮಿಳು ಶಾಸನವೊಂದರಲ್ಲಿ[11] ಪೊನ್ನಕ್ಕ ಎಂಬ ಸಾಮಾನ್ಯ ವರ್ಗದ ಮಹಿಳೆಯ ಉಲ್ಲೇಖ ಕಂಡುಬರುತ್ತದೆ. ಉನ್ನತ ವರ್ಗದ ಮಹಿಳೆಯರಂತೆ ಸಾಮಾನ್ಯ ವರ್ಗದ ಮಹಿಳೆಯರಿಗೆ ಸ್ವತಂತ್ರವಾಗಿ ದೇವಸ್ಥಾನ ನಿರ್ಮಾಣ ಮಾಡಿ ಅದರ ಸಕಲ ಪೂಜೆ ಪುರಸ್ಕಾರಕ್ಕೆ ದತ್ತಿ ಬಿಟ್ಟುಕೊಡುವಷ್ಟು ಸಾಮರ್ಥ್ಯವಿಲ್ಲದೆ ಹೋದರೂ, ತಮ್ಮ ಕೈಲಾದ ದಾನ-ದತ್ತಿ ನೀಡುತ್ತಿದ್ದುದನ್ನು ಶಾಸನಗಳಲ್ಲಿ ಗುರುತಿಸಬಹುದು. ಈ ಮೇಲಿನ ಶಾಸನದಲ್ಲಿ ಸೋಮಯಾಶಿಯಾರನ ಮಗನಾದ ಪಾಲಯ್ಯ ಎಂಬುವನ ಹೆಂಡತಿಯಾದ ಪೊನ್ನಕ್ಕಳು ಪುಂಗನೂರಿನ (ಈಗಿನ ಹೊಂಗನೂರು) ಕುಂದವ್ವೆ ವಿಣ್ಣಗರ್ ಆಳ್ವಾರ ದೇವರ ಪೂಜಾ ಕೈಂಕರ್ಯಕ್ಕಾಗಿ ಭೂಮಿಯನ್ನು ದಾನ ನೀಡಿದ ವಿವರ ದಾಖಲಾಗಿದೆ.

ಇಂದಿನ ಕಾಲದಲ್ಲಿ ಮಹಿಳೆಯರು ಭೂಮಿಯ ಒಡೆತನ ಹೊಂದುವಂತೆ ಪ್ರಾಚೀನ ಕಾಲದಲ್ಲಿಯೂ ಈ ಸ್ವಾತಂತ್ರ್ಯವನ್ನು ಪಡೆದಿದ್ದರೆಂದು ಶಾಸನಗಳಿಂದ ತಿಳಿಯುತ್ತದೆ. ಕ್ರಿ.ಶ. 1013ರ ಹೊಂಗನೂರು ಗ್ರಾಮದ ತಮಿಳಿನ ಶಾಸನವೊಂದರಲ್ಲಿ[12] ತ್ರೈಲೋಕ್ಯ ಚತುರ್ವೇದಿ ಮಂಗಲವಾದ ಪುಂಗನೂರಿನ ಸಭಾಸದಸ್ಯರು ಕುನ್ದವ್ವೆ ವಿಣ್ಣಗರಾಳ್ವಾರ್ ದೇವರಿಗೆ 'ಚರವಣಿಯಬಾಯಿ' ಎಂಬ ಮಹಿಳೆಯಿಂದ 9 ಕಳಂಜು ಚಿನ್ನಕ್ಕೆ ಭೂಮಿಯನ್ನು ಖರೀದಿಸಿ ದಾನಕೊಟ್ಟ ವಿವರವಿದೆ. ಇದರಿಂದ ಭೂ ಒಡೆತನ ಮಹಿಳೆಯರಿಗೂ ಇತ್ತು ಎಂದು ಸ್ಪಷ್ಟವಾಗುತ್ತದೆ.

ಅದೇ ರೀತಿ ಹೊಯ್ಸಳ ದೊರೆ ಮೂರನೇ ವೀರಬಲ್ಲಾಳನ ಕಾಲದ ಕ್ರಿ.ಶ. 1324ರ ಮಾಳಗಾಳು ಗ್ರಾಮದ ಶಿಲಾಶಾಸನದಲ್ಲಿ[13] ವೀರಬಲ್ಲಾಳನಿಗೆ ಪುಣ್ಯವಾಗಲೆಂದು ತೀರ್ಥರಾಜ ಎಂಬುವನ ಸಹೋದರರಾದ ನಾಗದೇವ, ಚೌಡದೇವರು ನೆಲಳಿಹಿತ್ತನ ಮಡದಿಯಾದ ನೆರತಿ ಎಂಬುವಳಿಗೆ ಮಾಳಿಗೆಹಳ್ಳಿಯ ಚತುಸ್ಸೀಮೆಯಲ್ಲಿ ಭೂಮಿಯನ್ನು ದಾನವಾಗಿ ನೀಡಿದ ವಿವರ ದಾಖಲಾಗಿದೆ. ಈ ಶಾಸನ ತ್ರುಟಿತವಾಗಿರುವುದರಿಂದ ನೆರತಿಗೆ ಯಾವ ಕಾರಣಕ್ಕಾಗಿ ದಾನ ಕೊಟ್ಟರು ಎಂಬ ಮಾಹಿತಿ ಲಭ್ಯವಾಗುವುದಿಲ್ಲ.

ಕ್ರಿ.ಶ. 1441ರ ಮಾಕಳಿ ಗ್ರಾಮದ ವಿಜಯನಗರದ ದೊರೆ ಇಮ್ಮಡಿ ದೇವರಾಯನ ಕಾಲದ ಶಾಸನದಲ್ಲಿ[14] ಪಾಳೆಯಗಾರನಾದ ಗೋಪಿನಾಯಕನ ನಾಯಕತನಕ್ಕೆ ಸಲ್ಲುವ ಮಾಕಳಿಯ ಕಾಲುವಳ್ಳಿಯಲ್ಲಿ ಗೋಪಸಮುದ್ರವೆಂದು ಹೊಸದಾದ ಕೆರೆಯನ್ನು ಕಟ್ಟಿದ ಸಂಬಂಧ ಊರಿನ ಮುಖಂಡನಾದ ಕೇತಗೌಂಡನು ಮುದ್ದಾಯನ ಮಗಳಿಗೆ ಮೂಗಳ ಗದ್ದೆಯನ್ನು ಕೆರೆಕಟ್ಟುಗೊಡಿಗೆಯಾಗಿ ಧಾರಾಪೂರ್ವಕವಾಗಿ ದಾನ ಕೊಟ್ಟ ವಿವರವಿದೆ. ಬಹುಶಃ ಈಕೆಯು ಕೆರೆಯನ್ನು ಕಟ್ಟುವ ಕಾರ್ಯದಲ್ಲಿ ಪಾಲ್ಗೊಂಡಿರಬೇಕು. ಅದಕ್ಕೆ ಪ್ರತಿಫಲವಾಗಿ ಮುಕ್ಕಾಲು ಖಂಡುಗ ಬೀಜವರಿ ಗದ್ದೆಯನ್ನು ದಾನವಾಗಿ ಪಡೆದಿದ್ದಾಳೆ. ಶಾಸನದಲ್ಲಿ ಈಕೆಯ ಹೆಸರು ಉಲ್ಲೇಖಗೊಂಡಿಲ್ಲ. ಒಟ್ಟಿನಲ್ಲಿ ಅಂದಿನ ಸಮಾಜದಲ್ಲಿ ಸ್ತ್ರೀಯರಿಗೆ ಪುರುಷರಷ್ಟೇ ಸಮಾನವಾಗಿ ಭೂಮಿಯ ಒಡೆಯರಾಗುವ ಅವಕಾಶ ದೊರೆಯುತ್ತಿದ್ದುದು ಈ ಮೇಲಿನ ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಜೈನ ಸಮಾಜದಲ್ಲಿ ಸನ್ಯಾಸ ಸ್ವೀಕರಿಸಿದ ಸನ್ಯಾಸಿನಿಯರನ್ನು ಜೈನ ಪರಿಭಾಷೆಯಲ್ಲಿ ಕಂತಿಯರೆಂದು ಕರೆಯುತ್ತಾರೆ. ಜೈನ ಸನ್ಯಾಸಿನಿಯರಾದ ಕಂತಿಯರು ಸನ್ಯಾಸ ಸ್ವೀಕರಿಸಿ ಧರ್ಮ ಪ್ರಸಾರದ ಹೊಣೆಹೊತ್ತ ಅಜ್ಜಿಯರಾಗಿದ್ದಾರೆ. ಇವರು ಬಸದಿಗಳಲ್ಲಿ ಧರ್ಮ ಪ್ರವಚನ ಕಾರ್ಯ ಮಾಡುತ್ತಿದ್ದರು. ಮಹಿಳೆಯರು ಕಂತಿಯರಾಗುವಲ್ಲಿ ಅವರ ಸ್ಥಾನಮಾನಗಳು ಮೇಲ್ಮಟ್ಟಕ್ಕೇರುತ್ತಿದ್ದವು. ಜೈನ ಧರ್ಮೀಯರಲ್ಲಿ ಹಲವಾರು ತ್ಯಾಗ-ಆಚರಣೆಗಳಂಥಹ ಕಠಿಣ

ವಿಧಾನಗಳ ಮೂಲಕ ಮೋಕ್ಷ ದೊರೆಯುತ್ತದೆಂಬ ನಂಬಿಕೆಯಿದೆ. ಹೀಗೆ ಈ ಸನ್ಯಾಸನ ವ್ರತ ಆಚರಿಸುವುದನ್ನು 'ಮಾಸ' ಎಂತಲೂ ಕರೆಯುತ್ತಾರೆ. ಮಾಸ ಎಂಬುದು ಸನ್ಯಾಸನ ವ್ರತವು ಎಷ್ಟರ ಮಟ್ಟಿಗೆ ಪರಿಪೂರ್ಣವಾಗಿದೆ ಎಂಬುದನ್ನು ನಿರ್ಧರಿಸುವ ಮಾನದಂಡವಾಗಿದೆ.

ಕ್ರಿ.ಶ. 900ರ ಬೇವೂರು ಗ್ರಾಮದ ಜೈನ ನಿಸಿದಿ ಶಾಸನವೊಂದರಲ್ಲಿ ಕದಿಳಿ ಕಂತಿ ಹಾಗೂ ಅರುಳ ಗಂಗಸೇನ ಕಂತಿಯರ ಉಲ್ಲೇಖವಿರುವುದನ್ನು ಕಾಣಬಹುದು.[15] ಬೇವೂರು ಗ್ರಾಮದ ಬೆಟ್ಟದ ಮೇಲಿನ ಈ ಶಾಸನದಲ್ಲಿ ಪ್ರಸ್ತುತದ ಬೇವೂರು ಗ್ರಾಮ 'ನಿಂಬ ಗ್ರಾಮ' ಎಂಬ ಹೆಸರಿನಿಂದ ಪ್ರಸಿದ್ಧ ಜೈನ ಕೇಂದ್ರವಾಗಿತ್ತು ಎಂದು ತಿಳಿಯುತ್ತದೆ. ಇದೇ ಶಾಸನದಲ್ಲಿ ಚಂದ್ರಸೇನ, ನಾಗಸೇನ ಮುಂತಾದ ಮುನಿಗಳು ಈ ಬೆಟ್ಟದ ಮೇಲೆ ಸಲ್ಲೇಖನ ವ್ರತ ಕೈಗೊಂಡು ಸಮಾಧಿ ಮರಣ ಹೊಂದಿದ ಸಂದರ್ಭದಲ್ಲಿ 'ನದ್ಯಾವಾಸಿಗಣದಾಮ' ಕದಿಳಿಕಂತಿಯು ಅರ್ಧ ಮಾಸವನ್ನು ಪೂರ್ಣಗೊಳಿಸಿದ ವಿವರ ಹಾಗೂ 'ಅರುಳಗಂಗಸೇನ' ಕಂತಿಯು ವ್ರತವನ್ನು ಪೂರ್ಣಗೊಳಿಸಿದ್ದನ್ನು ತಿಳಿಸುತ್ತದೆ. ಧರ್ಮದ ಮೂಲಕ ಮರಣ ಪಡೆಯಲು ನಿರ್ಧರಿಸುವ ಈ ಕಂತಿಯರು ಮುಂದೆ ಸಮಾಧಿ ಮರಣವನ್ನಪ್ಪುತ್ತಿದ್ದರು.

ಗೃಹಿಣಿ ಸಮಾಜದ ತದ್ವಿರುದ್ಧವಾದ ವರ್ಗವೇ ಸೂಳೆ ಸಮಾಜವಾಗಿದೆ. ಸಾಮಾಜಿಕವಾಗಿ ತೆಗಳಿಕೆಗೆ ಗುರಿಯಾಗಿದ್ದರೂ ಜನ ಮೆಚ್ಚುವ ಕಾರ್ಯಗಳಲ್ಲಿ ತೊಡಗಿ ಸಮಾಜದ ಮುಖ್ಯ ಭೂಮಿಕೆಯಲ್ಲಿ ಗುರುತಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಸೂಳೆ ಎಂದಾಕ್ಷಣ ರಾಜನ ಭೋಗ ವಸ್ತುಗಳ ಪಟ್ಟಿಯಲ್ಲಿ ಅದ್ವಿತೀಯಳಾಗಿದ್ದವಳು ಎಂದೆನ್ನಬಹುದು. ಪಟ್ಟಾಭಿಷಿಕ್ತ ರಾಣಿಯ, ಇನ್ನುಳಿದ ರಾಣಿವರ್ಗದ ಸಮಾನ ಅಂತಸ್ತು ಇಲ್ಲದಿದ್ದರೂ ರಾಜನ ಮನಕ್ಕೆ ಅತ್ಯಂತ ಸಮೀಪದ ವ್ಯಕ್ತಿಯಾಗಿದ್ದಳು. ಇವರು ಭೋಗಕ್ಕೆ ಮಾತ್ರ ಸೀಮಿತವಾಗಿರದೆ ಸಾಮಾಜಿಕ ಕ್ಷೇತ್ರಗಳಲ್ಲಿ ಅಂದರೆ ದೇವಾಲಯ ನಿರ್ಮಾಣ, ಜೀರ್ಣೋದ್ಧಾರ, ಪೂಜಾ ಕಾರ್ಯಗಳು ಮುಂತಾದ ಕಾರ್ಯಗಳಲ್ಲಿಯೂ ಭಾಗವಹಿಸುವುದು, ದಾನ ನೀಡುವುದು, ಕೆರೆ–ಕಟ್ಟೆಗಳ ನಿರ್ಮಾಣ, ಬಾವಿ, ಅರವಟಿಗೆಗಳನ್ನು ಕಟ್ಟಿಸುವ ಕಾರ್ಯ ಮುಂತಾದವುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು ಎಂದು ತಿಳಿಯುತ್ತದೆ.

ಕ್ರಿ.ಶ. 10ನೇ ಶತಮಾನದ ಮಳೂರು ಗ್ರಾಮದ ವೀರಗಲ್ಲೊಂದರಲ್ಲಿ 'ಸೂಳೆ ಬಿಯ್ಯಳ್'ಳ ಉಲ್ಲೇಖವಿದೆ.[16] ಈ ಶಾಸನದಲ್ಲಿ ಪೆರ್ಮಾಡಿಯ ಸೂಳೆ ಬಿಯ್ಯಳ್ ಎಂದಿದೆ. ಗಂಗದೊರೆ ಎರಡನೇ ಮಾರಸಿಂಹನೇ ಈ ಶಾಸನದಲ್ಲಿ ಉಕ್ತವಾಗಿರುವ ಪೆರ್ಮಾಡಿ. ಶಾಸನ ತ್ರುಟಿತವಾಗಿರುವುದರಿಂದ ಪೂರ್ಣ ಮಾಹಿತಿಯು ಲಭ್ಯವಾಗುವುದಿಲ್ಲ. ವೀರನಾದ ಪೊಲೆತಾಳ್ವನ ಮಗ ಭುವನಾದಿತ್ಯನ ಉಲ್ಲೇಖವಿದೆ. ಬಹುಶಃ ಭುವನಾದಿತ್ಯನು ಯುದ್ಧದಲ್ಲಿ ವೀರಮರಣವನ್ನು ಹೊಂದಿದಾಗ ಸೂಳೆಬಿಯ್ಯಳ್ ವೀರಗಲ್ಲನ್ನು ಹಾಕಿಸಿರಬೇಕು ಎನಿಸುತ್ತದೆ. ಅದೇ ರೀತಿ ಬೇವೂರು ಗ್ರಾಮದ ಗಂಗರ ಕಾಲದ ಶಾಸನವೊಂದರಲ್ಲಿ[17] ಸಕರರ ಸೂಳೆಯಬ್ಬೆಯ ಮಗಳು ವೀದಬ್ಬೆಯು ಬೇವೂರು ಗ್ರಾಮದ ಕೆರೆಯ ತೂಬನ್ನು ಮಾಡಿಸಿದ ವಿವರ ದಾಖಲಾಗಿದೆ.

ಸಮಾಜದಲ್ಲಿ ಸೂಳೆಯರ ಮಕ್ಕಳಿಗೂ ತಕ್ಕ ಗೌರವವಿತ್ತು. ಸಮಾಜ ಸೇವೆಯ ಕಾರ್ಯಗಳಲ್ಲಿ ಸೂಳೆಯರ ಮಕ್ಕಳು ಪಾಲ್ಗೊಂಡು, ಸಮಾಜದಲ್ಲಿ ತಮ್ಮನ್ನು ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು ಎಂಬುದಕ್ಕೆ ಈ ಶಾಸನದಲ್ಲಿ ಬರುವ ಸೂಳೆಯಬ್ಬೆಯ ಮಗಳು ವೀದಬ್ಬೆ ಉದಾಹರಣೆಯಾಗಿದ್ದಾಳೆ. ಹೀಗೆ ಸಮಾಜದಲ್ಲಿ ಕೀಳಾಗಿ ಗುರುತಿಸಲ್ಪಡುವ ಸೂಳೆಯರು ಸಾಮಾಜಿಕ ಕಾರ್ಯಗಳಲ್ಲಿ ತೊಡಗುತ್ತಿದ್ದರು ಎಂಬುದಕ್ಕೆ ಈ ಶಾಸನಗಳು ಉದಾಹರಣೆಯಾಗಿವೆ.

DOI: 10.59176
http://www.kristujayantijournal.com/index.php/KJKSP

ಹೀಗೆ ಚನ್ನಪಟ್ಟಣ ತಾಲ್ಲೂಕಿನ ಶಾಸನಗಳಿಂದ ಅಂದಿನ ಕಾಲದ ಮಹಿಳೆಯರು ಹೊಂದಿದ ಸ್ಥಾನಮಾನವನ್ನು ಅರಿಯಬಹುದು. ರಾಜನ ಮಡದಿಯಾದ ಕಾರಣಕ್ಕೆ ಬ್ರಾಹ್ಮಣರ ಅಗ್ರಹಾರಗಳಿಗೆ ಆಕೆಯ ಹೆಸರನ್ನು ನಾಮಕರಣ ಮಾಡುತ್ತಿದ್ದ ವಿಚಾರ, ಮೇಲ್ವರ್ಗದ ಮಹಿಳೆಯರು ದೇವಾಲಯ ನಿರ್ಮಾಣ, ಜೀರ್ಣೋದ್ಧಾರ ಕಾರ್ಯ, ದೇವಾಲಯದ ಪೂಜಾಪುನಸ್ಕಾರಕ್ಕಾಗಿ ದಾನ ನೀಡುತ್ತಿದ್ದದು, ಕೆರೆ, ಬಾವಿ ನಿರ್ಮಿಸುತ್ತಿದ್ದ ವಿಚಾರ, ಗೃಹಿಣಿ ಜೀವನಕ್ಕೆ ತದ್ವಿರುದ್ಧವಾಗಿದ್ದ ಸೂಳೆಯರು ಮಾಡಿದ ಕೆರೆಯ ತೂಬಿನ ನಿರ್ಮಾಣ ಕಾರ್ಯ, ವೀರಗಲ್ಲು ಹಾಕಿಸುವಂತಹ ಸಾಮಾಜಿಕ ಕಾರ್ಯಗಳಲ್ಲಿ ತೊಡಗುತ್ತಿದ್ದ ವಿವರಗಳು, ಜೈನ ಸನ್ಯಾಸಿನಿ ಕಂತಿಯರು, ಸಹಗಮನ ಪದ್ಧತಿಯ ಮೂಲಕ ಪ್ರಾಣತ್ಯಾಗ ಮಾಡುತ್ತಿದ್ದ ಮಹಾಸತಿಯರು ಹಾಗೂ ಸಾಮಾನ್ಯ ವರ್ಗದ ಮಹಿಳೆಯರ ಸ್ಥಾನಮಾನ ಮೊದಲಾದವುಗಳನ್ನು ಶಾಸನಗಳಲ್ಲಿ ದಾಖಲಾಗಿರುವುದನ್ನು ಗುರುತಿಸಬಹುದು.

**ಕೊನೆಟಿಪ್ಪಣಿಗಳು :**

1. ಬಿ.ಎಲ್.ರೈಸ್(ಸಂ) : ಎ.ಕ.–9, ಚನ್ನಪಟ್ಟಣ–141, ಮಳೂರುಪಟ್ಣ, ಪು.333
2. ಬಿ.ಎಲ್.ರೈಸ್(ಸಂ) : ಎ.ಕ.–10, ಮುಳಬಾಗಿಲು–80, ಮೇಲಾಗಣಿ, ಪು.87
3. ಬಿ.ಎಲ್.ರೈಸ್(ಸಂ) : ಎ.ಕ.–9, ಚನ್ನಪಟ್ಟಣ–130, ಮಳೂರುಪಟ್ಣ, ಪು.160
4. ಬಿ.ಎಲ್.ರೈಸ್(ಸಂ) : ಎ.ಕ.–9, ಚನ್ನಪಟ್ಟಣ–132, ಮಳೂರುಪಟ್ಣ, ಪು.161
5. ಎ.ಕ.–9 ಅನುಬಂಧ ಸಂಪುಟ, ಚನ್ನಪಟ್ಟಣ–220, ಬೈರನಾಯಕನಹಳ್ಳಿ, ಪು.52
6. ಬಿ.ಎಲ್.ರೈಸ್(ಸಂ) : ಎ.ಕ.–9, ಚನ್ನಪಟ್ಟಣ–46, ಹೊಂಗನೂರು, ಪು.313
7. ಡಾ.ಎಂ.ಕೆ.ಮಂಜುನಾಥ : ಶಾಸನ ಪರಿವೀಕ್ಷಣೆ, ಪು.54
8. ಎ.ಕ.–9 ಅನುಬಂಧ ಸಂಪುಟ, ಚನ್ನಪಟ್ಟಣ–199, ಮಳೂರು, ಪು.47
9. ಡಾ.ಎಂ.ಜಿ.ನಾಗರಾಜ್, ಡಾ.ಪಿ.ವಿ.ಕೃಷ್ಣಮೂರ್ತಿ(ಸಂ), ಇತಿಹಾಸ ದರ್ಶನ, ಸಂಪುಟ–20, ಪು.119
10. ಬಿ.ಎಲ್.ರೈಸ್(ಸಂ) : ಎ.ಕ.–9, ಚನ್ನಪಟ್ಟಣ–108, ಕೂಡ್ಲೂರು, ಪು.330
11. ಬಿ.ಎಲ್.ರೈಸ್(ಸಂ) : ಎ.ಕ.–9, ಚನ್ನಪಟ್ಟಣ–42, ಹೊಂಗನೂರು, ಪು.141
12. ಬಿ.ಎಲ್.ರೈಸ್(ಸಂ) : ಎ.ಕ.–9, ಚನ್ನಪಟ್ಟಣ–42ಎ, ಹೊಂಗನೂರು, ಪು.141
13. ಬಿ.ಎಲ್.ರೈಸ್(ಸಂ) : ಎ.ಕ.–9, ಚನ್ನಪಟ್ಟಣ–51, ಮಾಳಗಾಳು, ಪು.315
14. ಬಿ.ಎಲ್.ರೈಸ್(ಸಂ) : ಎ.ಕ.–9, ಚನ್ನಪಟ್ಟಣ–169, ಮಾಕಳಿ, ಪು.346
15. ಬಿ.ಎಲ್.ರೈಸ್(ಸಂ) : ಎ.ಕ.–9, ಚನ್ನಪಟ್ಟಣ–69, ಬೇವೂರು, ಪು.323
16. ಬಿ.ಎಲ್.ರೈಸ್(ಸಂ) : ಎ.ಕ.–9, ಚನ್ನಪಟ್ಟಣ–3, ಮಳೂರು, ಪು.113
17. ಎ.ಕ.–9 ಅನುಬಂಧ ಸಂಪುಟ, ಚನ್ನಪಟ್ಟಣ–212, ಬೇವೂರು, ಪು.51

**ಪರಾಮರ್ಶನ ಗ್ರಂಥಗಳು :**

1. ಬಿ.ಎಲ್.ರೈಸ್ (ಸಂ) : ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–10, ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಶಾಸನಗಳು, ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು, 1905.

2. ಎಪಿಗ್ರಾಫಿಯಾ ಕರ್ನಾಟಿಕ–9 ಅನುಬಂಧ ಸಂಪುಟ, ಮೈಸೂರು ಆರ್ಕಿಯಾಲಜಿಕಲ್ ಡಿಪಾರ್ಟ್ಮೆಂಟ್, ಮೈಸೂರು.

3. ಬಿ.ಎಲ್.ರೈಸ್ (ಸಂ) : ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–9, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಶಾಸನಗಳು, ಮೈಸೂರು ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್, ಬೆಂಗಳೂರು, 1905.

4. ಡಾ.ಎಂ.ಎಂ.ಕಲಬುರ್ಗಿ : ಸಮಾಧಿ–ಬಲಿದಾನ–ವೀರ ಮರಣ ಸ್ಮಾರಕಗಳು, ಐಬಿಎಚ್ ಪ್ರಕಾಶನ, ಬೆಂಗಳೂರು, 1980.

5. ಡಾ.ಎಂ.ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2008.

6. ಡಾ. ಚೆನ್ನಕ್ಕ ಪಾವಟೆ : ಕರ್ನಾಟಕ ಶಾಸನೋಕ್ತ ಮಹಿಳೆ ಸಮೀಕ್ಷೆ–ಸಂಸ್ಕೃತಿ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, 2008.

7. ಡಾ.ಎಂ.ಕೆ.ಮಂಜುನಾಥ : ಶಾಸನ ಪರಿವೀಕ್ಷಣೆ, ಎಸ್.ಎಲ್.ಎನ್.ಪಬ್ಲೀಕೇಷನ್, ಬೆಂಗಳೂರು, 2015.

8. ಡಾ.ಎಂ.ಜಿ.ನಾಗರಾಜ್, ಡಾ.ಪಿ.ವಿ.ಕೃಷ್ಣಮೂರ್ತಿ(ಸಂ) : ಇತಿಹಾಸ ದರ್ಶನ, ಸಂಪುಟ–20, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, 2011

DOI: 10.59176
http://www.kristujayantijournal.com/index.php/KJKSP